**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಪ್ರಾಧಿಕಾರ**

ವಿಷಯ : 2015ನೇ ಸಾಲಿನಲ್ಲಿ ಆಡಳಿತ ಮಂಡಲಿಗಳ ಪದಾವಧಿ ಮುಗಿಯಲಿರುವ ಮಾಧ್ಯಮಿಕ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಗಳಿಗೆ ಸಾಮಾನ್ಯ / ತತ್ಪರಿಣಾಮ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವ ಸಂಬಂಧ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಕ ಮಾಡುವ ಕುರಿತು.

ಉಲ್ಲೇಖ : ಸಹಕಾರ ಚುನಾವಣಾ ಆಯೋಗದ ಸುತ್ತೋಲೆ ಸಂಖ್ಯೆ : ಸಚುಆ/ಚುನಾವಣೆ/ಮಾಹಿತಿ/54/2014 ದಿನಾಂಕ : 31-05-2014.

★★★★★

<u>ಪ್ರಸ್ತಾವನೆ :-</u>

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ (ಸಂಕ್ಷಿಪ್ತವಾಗಿ 'ಅಧಿನಿಯಮ') ಪ್ರಕರಣ 39-ಎ ಹಾಗೂ ಪ್ರಕರಣ 39-ಎಎ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ (ಸಂಕ್ಷಿಪ್ತವಾಗಿ ಸೌಹಾರ್ದ ಸಹಕಾರಿ ಅಧಿನಿಯಮ) ಪ್ರಕರಣ 26 ಮತ್ತು 26ಎ ಗಳ ಅವಕಾಶದಂತೆ ಯಾವುದೇ ಆಕಸ್ಮಿಕ ಖಾಲಿಸ್ಥಾನವನ್ನು ಒಳಗೊಂಡಂತೆ ಸಹಕಾರ ಸಂಘದ / ಸೌಹಾರ್ದ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರ ಪ್ರತಿಯೊಂದು ಸಾಮಾನ್ಯ ಚುನಾವಣೆಯನ್ನು ಮತ್ತು ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರ ಚುನಾವಣಾ ಪ್ರಾಧಿಕಾರದ ಅಧೀಕ್ಷಣೆಗೆ ಒಳಪಟ್ಟು ನಡೆಸತಕ್ಕದ್ದಾಗಿದೆ. ಮೇಲೆ ತಿಳಿಸಿದಂತೆ ಸಹಕಾರ ಸಂಘದ / ಸಹಕಾರಿಯ ಆಡಳಿತ ಮಂಡಲಿ ಚುನಾವಣೆಗಳನ್ನು / ಪದಾಧಿಕಾರಿಗಳ ಚುನಾವಣೆಗಳನ್ನು ಸದರಿ ಅಧಿನಿಯಮ / ನಿಯಮಗಳು ಹಾಗೂ ಸಹಕಾರ ಸಂಘಗಳ / ಸಹಕಾರಿಗಳ ಉಪವಿಧಿಗಳನ್ನು ಗಮನದಲ್ಲಿಟ್ಟುಕೊಂಡು ಕಾನೂನಿಗೆ ಅನುಗುಣವಾಗಿ ನಡೆಸತಕ್ಕದ್ದಾಗಿದೆ. 2015ನೇ ಸಾಲಿನಲ್ಲಿ ಅವಧಿ ಮುಗಿಯಲಿರುವ ಮಾಧ್ಯಮಿಕ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆಗಳು / ತತ್ಪರಿಣಾಮ ಪದಾಧಿಕಾರಿಗಳ ಚುನಾವಣೆಗಳನ್ನು ಅಧಿನಿಯಮ ಪ್ರಕರಣ 39ಎ, ಸೌಹಾರ್ದ ಸಹಕಾರಿ ಅಧಿನಿಯಮ ಪ್ರಕರಣ 26, 26ಎ ಗಳ ಅವಕಾಶದಂತೆ ನಡೆಸುವ ಸಂಬಂಧ ಪ್ರಾಧಿಕಾರವು ಅಗತ್ಯ ಕ್ರಮ ಕೈಗೊಳ್ಳಬೇಕಾಗಿದ್ದು 2015ನೇ ಸಾಲಿನಲ್ಲಿ ಆಡಳಿತ ಮಂಡಲಿಯ ಪದಾವಧಿ ಮುಕ್ತಾಯವಾಗಲಿರುವ ಮಾಧ್ಯಮಿಕ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಸಂಬಂಧಿಸಿದಂತೆ ಆಡಳಿತ ಮಂಡಲಿ ಸದಸ್ಯರ ಸಾಮಾನ್ಯ ಚುನಾವಣೆ ತತ್ಪರಿಣಾಮ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವ ಬಗ್ಗೆ ಮತದಾರರ ಪಟ್ಟಿ ತಯಾರಿಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ಪೂರ್ವಸಿದ್ಧತಾ ಕಾರ್ಯವನ್ನು ಕೈಗೊಳ್ಳಬೇಕಾಗಿರುತ್ತದೆ. ಅದರಂತೆ ಪ್ರತಿಯೊಂದು ಸಹಕಾರ ಸಂಘದ / ಸಹಕಾರಿಯ ಆಡಳಿತ ಮಂಡಲಿಯು ತನ್ನ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಹಿಂದಿನ ಕನಿಷ್ಟ ಆರು ತಿಂಗಳಿಗೆ ಮುಂಚೆ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದಾಗಿದೆ. ಅದರಂತೆ ಸಕ್ಷಮ ನಿಬಂಧಕರುಗಳಿಂದ ಪ್ರಾಧಿಕಾರಕ್ಕೆ ಸಂಘಗಳ ವಿವರಗಳು ಸಲ್ಲಿಕೆಯಾಗಿರುವುದಿಲ್ಲ. ಆದಾಗ್ಯೂ ಪ್ರಾಧಿಕಾರದಿಂದ ಸಭೆಗಳನ್ನು ನಡೆಸಿ ಸತತ ಅನುಸರಣಾ ಕ್ರಮ ಕೈಗೊಂಡು ಮಾಹಿತಿಯನ್ನು ಪಡೆಯಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು, 2013ರ ನಿಯಮ 13ಡಿ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಿತ (ತಿದ್ದುಪಡಿ) ನಿಯಮಗಳು 2013ರ ನಿಯಮ 5ಬಿ(3)ರ ಅವಕಾಶದಂತೆ ಜಿಲ್ಲಾ ಚುನಾವಣಾಧಿಕಾರಿಯ ಕೂಲಂಕುಷ ಪರಿಶೀಲನೆಯ ನಂತರ ಸಂಘದ / ಸಹಕಾರಿಗಳ ಆಡಳಿತ ಮಂಡಲಿಗಳಿಗೆ ಪದಾವಧಿ ಮುಕ್ತಾಯವಾಗುವ 120 ದಿನಗಳ ಪೂರ್ವದಲ್ಲಿ ;

01. ಸಹಕಾರ ಸಂಘದ / ಸಹಕಾರಿಯ ಹೆಸರು ಮತ್ತು ಅಂಚೆ ವಿಳಾಸ.
02. ಆಡಳಿತ ಮಂಡಲಿಗೆ ಆಯ್ಕೆ ಮಾಡಬೇಕಾಗಿರುವ ನಿರ್ದೇಶಕರ ಸಂಖ್ಯೆ.
03. ಆಡಳಿತ ಮಂಡಲಿ ಪದಾವಧಿ ಮುಕ್ತಾಯವಾಗುವ ದಿನಾಂಕ ಮತ್ತು
04. ಚುನಾವಣೆಗಳನ್ನು ನಡೆಸಬಹುದಾದ ಸ್ಥಳ ಹಾಗೂ ಚುನಾವಣಾ ಪ್ರಾಧಿಕಾರಕ್ಕೆ ಅವಶ್ಯವಿರುವ ಇತರೆ ಮಾಹಿತಿಗಳು

.........2/-

ಇವುಗಳನ್ನೊಳಗೊಂಡ ಚುನಾವಣೆಗೆ ಸನ್ನಿಹಿತವಾಗಿರುವ ಎಲ್ಲಾ ಸಹಕಾರ ಸಂಘಗಳ / ಸಹಕಾರಿಗಳ ಕ್ರೋಢೀಕೃತ ಪಟ್ಟಿಯನ್ನು ಕಳುಹಿಸತಕ್ಕದ್ದಾಗಿದೆ. ಅದರಂತೆ ಚುನಾವಣಾ ಪ್ರಾಧಿಕಾರವು ಮಾಹಿತಿ ಪಡೆಯಲು ಸುತ್ತೋಲೆ ಸಂಖ್ಯೆ : ಸಚುಆ/ಚುನಾವಣೆ/ಮಾಹಿತಿ/54/2014 ದಿನಾಂಕ : 31-05-2014ರನ್ವಯ ನಿಯಮ 13(ಡಿ)ಯಂತೆ 13 ಕಾಲಂಗಳ ನಮೂನೆಯಲ್ಲಿ 2015ನೇ ಸಾಲಿನಲ್ಲಿ ಚುನಾವಣೆ ನಡೆಸಲು ಬಾಕಿ ಇರುವ ಸಹಕಾರ ಸಂಘಗಳ / ಸಹಕಾರಿಗಳ ಮಾಹಿತಿಯನ್ನು ಸಂಘ / ಸಹಕಾರಿಗಳವಾರು ಮತ್ತು ಕ್ರೋಢೀಕೃತ ಪಟ್ಟಿಯನ್ನು ಕಳುಹಿಸಿಕೊಡುವಂತೆ ತಿಳಿಸಿ ಅದರಂತೆ ಮಾಹಿತಿ ಪಡೆದು ಮಾಧ್ಯಮಿಕ / ಫೆಡರಲ್ / ಅಫೆಕ್ಸ್ ಸಂಘಗಳ / ಸಹಕಾರಿಗಳಿಗೆ ಚುನಾವಣೆ ನಡೆಸಲು ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡಬೇಕಾಗಿದ್ದು ಆ ಪ್ರಕಾರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013ರ ನಿಯಮ 2(i-1) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ನಿಯಮ 2(ಜಿ-2)ಗಳ ಅವಕಾಶಗಳಂತೆ ಜಿಲ್ಲಾ ಚುನಾವಣಾಧಿಕಾರಿಯನ್ನು ನೇಮಿಸುವ ಅಧಿಕಾರ / ಜವಾಬ್ದಾರಿಯು ಸಹಕಾರ ಚುನಾವಣಾ ಪ್ರಾಧಿಕಾರದ್ದಾಗಿರುತ್ತದೆ.

ಈ ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವಂತೆ ಎರಡನೇ ಹಂತದ ಮಾಧ್ಯಮಿಕ ಸಹಕಾರ ಸಂಘಗಳು / ಸಹಕಾರಿಗಳ ಆಡಳಿತ ಮಂಡಲಿಗಳಿಗೆ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

## ಆದೇಶ

ಸಂಖ್ಯೆ : ಸ.ಚು.ಪ್ರಾ/ಚುನಾವಣೆ/ಆಡಳಿತ/ಮಾಧ್ಯಮಿಕ/ 102 /2014 ದಿನಾಂಕ : 12/12/2014

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮ 2013ರ ನಿಯಮ 2(i-1) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ನಿಯಮ 2(ಜಿ-2) ರಂತೆ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಎನ್.ಸಿ.ಮುನಿಯಪ್ಪ, ಕರ್ನಾಟಕ ರಾಜ್ಯದ ಸಹಕಾರ ಚುನಾವಣಾ ಪ್ರಾಧಿಕಾರದ ಆಯುಕ್ತನಾದ ನಾನು, ರಾಜ್ಯದ ನಾಲ್ಕು ಪ್ರಾಂತಗಳ ಪ್ರಾಂತೀಯ ಜಂಟಿ ನಿಬಂಧಕರನ್ನು ಅವರ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ಮಾಧ್ಯಮಿಕ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ನಡೆಯುವ ಆಡಳಿತ ಮಂಡಲಿ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸಲು ಜಿಲ್ಲಾ ಚುನಾವಣಾಧಿಕಾರಿಗಳನ್ನಾಗಿ ಮುಂದಿನ ಆದೇಶದವರೆಗೆ ನೇಮಿಸಿರುತ್ತೇನೆ.

ಜಿಲ್ಲಾ ಚುನಾವಣಾಧಿಕಾರಿಗಳು ಮಾಧ್ಯಮಿಕ ಸಹಕಾರ ಸಂಘಗಳು / ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಂದ ನಿಯಮಾನುಸಾರ ಮತದಾರರ ಪಟ್ಟಿ ಪಡೆದು ಸಲ್ಲಿಸಿದ ಮತದಾರರ ಪಟ್ಟಿಯನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಪರಿಶೀಲಿಸಿ ಅರ್ಹ ಮತದಾರರ ಪಟ್ಟಿ ಹಾಗೂ ಮತನೀಡುವ ಹಕ್ಕುಳ್ಳ / ಸುಸ್ತಿದಾರರ, ಅರ್ಹತೆಹೊಂದಿರುವ ಹಾಗೂ ಇನ್ನಿತರ ಮತದಾರರ ಕರಡು ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ ಕನಿಷ್ಠ 45 ದಿನಗಳ ಮುಂಚಿತವಾಗಿ ಪ್ರಕಟಿಸಿ, ಆಕ್ಷೇಪಣೆಗಳನ್ನು ಆಹ್ವಾನಿಸುವುದು ನಂತರ 15 ದಿನಗಳ ಪೂರ್ವದಲ್ಲಿ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲು ಅಗತ್ಯ ಕ್ರಮವಿಡತಕ್ಕದ್ದು. ನಂತರ ಮತದಾರರ

.......3/-

ಅಂತಿಮ ಪಟ್ಟಿ ಮತ್ತು ಚುನಾವಣಾ ವೇಳಾ ಪಟ್ಟಿಗಳನ್ನು ಸಂಬಂಧಪಟ್ಟ ಮಾಧ್ಯಮಿಕ ಸಹಕಾರ ಸಂಘ / ಸಹಕಾರಿಯ ಸೂಚನಾಫಲಕದಲ್ಲಿ ಹಾಗೂ ಸಹಕಾರ ಇಲಾಖೆಯ ಸ್ಥಳೀಯ ಕಛೇರಿಗಳ ಸೂಚನಾಫಲಕದಲ್ಲಿ ಮತ್ತು ಜಿಲ್ಲಾಚುನಾವಣಾಧಿಕಾರಿಗಳಿಗೆ ಅಗತ್ಯವೆನಿಸಿರುವ ಇನ್ನಿತರ ಸ್ಥಳಗಳಲ್ಲಿ ಪ್ರಕಟಿಸತಕ್ಕದ್ದು. ಅಲ್ಲದೆ ಜಿಲ್ಲಾ ಚುನಾವಣಾಧಿಕಾರಿಗಳು ಸಹಾಯಕ ಚುನಾವಣಾಧಿಕಾರಿಗಳ ನೆರವಿನೊಂದಿಗೆ ಅನುಬಂಧದಲ್ಲಿ ಸೂಚಿಸಿರುವ ನಿರ್ದೇಶನ ಮತ್ತು ಮಾರ್ಗಸೂಚಿಗಳನ್ನು ಚಾಚೂತಪ್ಪದೆ ಪಾಲಿಸತಕ್ಕದ್ದು.

(ಎನ್.ಸಿ.ಮುನಿಯಪ್ಪ)
ಸಹಕಾರ ಚುನಾವಣಾ ಪ್ರಾಧಿಕಾರದ ಆಯುಕ್ತರು.

ಸಹಕಾರ ಸಂಘಗಳ ಜಂಟಿನಿಬಂಧಕರು,
..........................................ಪ್ರಾಂತ
ಹಾಗೂ ಪ್ರಾಂತಕ್ಕೆ ಒಳಪಡುವ ಜಿಲ್ಲೆಗಳ
ಜಿಲ್ಲಾ ಚುನಾವಣಾಧಿಕಾರಿಗಳು.

ಪ್ರತಿಗಳು :-

01. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, 6ನೇ ಅಂತಸ್ತು, ಬಹುಮಹಡಿಕಟ್ಟಡ, ಬೆಂಗಳೂರು-560 001.
02. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1,ಆಲಿಆಸ್ಕರ್ ರಸ್ತೆ, ಬೆಂಗಳೂರು-560052.
03. ಸಹಕಾರ ಸಂಘಗಳ ಅಪರನಿಬಂಧಕರು (ಪತ್ತು), (ಕೈಗಾರಿಕೆ ಮತ್ತು ಹೈನುಗಾರಿಕೆ), (ವಸತಿ ಮತ್ತು ಇತರೆ), (ಬಳಕೆ ಮತ್ತು ಮಾರಾಟ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು.
04. ಸಹಕಾರ ಸಂಘಗಳ ಜಂಟಿನಿಬಂಧಕರು (ಆಡಳಿತ ಮತ್ತು ಅಭಿವೃದ್ಧಿ), (ಪಟ್ಟಣ ಬ್ಯಾಂಕುಗಳ ವಿಭಾಗ), (ಐ.ಸಿ.ಡಿ.ಪಿ) ಮತ್ತು (ಕಾನೂನು ಕೋಶ), ಕೇಂದ್ರ ಕಛೇರಿ, ಬೆಂಗಳೂರು.
05. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರುಗಳಿಗೆ.
06. ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ.
07. ಸಹಕಾರ ಚುನಾವಣಾ ಪ್ರಾಧಿಕಾರದ ಜಂಟಿನಿಬಂಧಕರು / ಉಪನಿಬಂಧಕರು / ಸಹಾಯಕ ನಿಬಂಧಕರು ಬೆಂಗಳೂರು ಪ್ರಾಂತ / ಬೆಳಗಾವಿ ಪ್ರಾಂತ / ಕಲಬುರಗಿ ಪ್ರಾಂತ / ಮೈಸೂರು ಪ್ರಾಂತ.
08. ರಾಜ್ಯಮಟ್ಟದ ಎಲ್ಲಾ ಮಹಾಮಂಡಳಿ / ಅಪೆಕ್ಸ್ ಸಹಕಾರ ಸಂಘಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ.
09. ಕಛೇರಿ ಆದೇಶದ ಕಡತಕ್ಕೆ / ರಕ್ಷಾ ಕಡತಕ್ಕೆ.

**ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರ ಆದೇಶ ಸಂಖ್ಯೆ : ಸ.ಚು.ಪ್ರಾ/ಚುನಾವಣೆ/ಆಡಳಿತ/ ಮಾಧ್ಯಮಿಕ/ 102 /2014 ದಿನಾಂಕ : 12/12/2014ಕ್ಕೆ ಅನುಬಂಧ.**

01. ಮಾಧ್ಯಮಿಕ ಸಹಕಾರ ಸಂಘಗಳು / ಸಹಕಾರಿಗಳ ಆಡಳಿತ ಮಂಡಲಿಗಳ ಸಾಮಾನ್ಯ ಚುನಾವಣೆಯನ್ನು ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960, ಸೌಹಾರ್ದ ಸಹಕಾರಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಅವಕಾಶಗಳು, ಮಾಧ್ಯಮಿಕ ಸಂಘಗಳ / ಸಹಕಾರಿಗಳ ನೊಂದಾಯಿತ ಉಪವಿಧಿಗಳನ್ವಯ ಹಾಗೂ ಸಹಕಾರ ಚುನಾವಣಾ ಪ್ರಾಧಿಕಾರದ ಮಾರ್ಗಸೂಚಿಗಳನ್ವಯ ನಡೆಸುವ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿಗಳು ಅಗತ್ಯ ಕ್ರಮವಿಡತಕ್ಕದ್ದಾಗಿರುತ್ತದೆ.

02. ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ : ಸಿ.ಒ/15/ಸಿಎಲ್ಎಂ/2013, ಬೆಂಗಳೂರು ದಿನಾಂಕ : 19-09-2013ರಂತೆ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ಕ್ಕೆ ತಿದ್ದುಪಡಿ ತಂದಿದ್ದು, ಅದರಂತೆ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013 ಅನ್ನು ದಿನಾಂಕ : 19-09-2013 ರಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ರಾಜ್ಯ ಪತ್ರಿಕೆಯಲ್ಲಿ ಅಧಿಕೃತವಾಗಿ ಪ್ರಕಟಿಸಿದ್ದು, ಅಂದಿನಿಂದ ಜಾರಿಗೆ ಬಂದಿರುತ್ತದೆ. ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆಗೆ ಸಂಬಂಧಿಸಿದಂತೆ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013 ಅನ್ನು ಗಮನದಲ್ಲಿಟ್ಟುಕೊಂಡು ಕ್ರಮವಿಡತಕ್ಕದ್ದು.

03. ಸಹಕಾರ ಚುನಾವಣಾ ಪ್ರಾಧಿಕಾರು ಚುನಾವಣೆಗಳನ್ನು / ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವ ಸಂಬಂಧವಾಗಿ ಈಗಾಗಲೇ ಹಲವಾರು ಅಧಿಸೂಚನೆ / ಆದೇಶ ಮತ್ತು ಸುತ್ತೋಲೆಗಳನ್ನು ಹೊರಡಿಸಿದ್ದು ಈಗಾಗಲೇ ಪತ್ರ ಮುಖೇನ / ಇ-ಮೇಲ್ ಮೂಲಕ ರಾಜ್ಯದ ಎಲ್ಲಾ ಸಹಕಾರ ಇಲಾಖಾ ಅಧಿಕಾರಿಗಳಿಗೂ ಕಳುಹಿಸಲಾಗಿದೆ ಹಾಗೂ ಆಯೋಗದ ವೆಬ್‌ಸೈಟ್ ಗಮನಿಸುವುದರಿಂದ ಮೇಲ್ಕಂಡವುಗಳನ್ನು ಪಡೆಯಬಹುದಾಗಿದೆ.

04. ಸಹಕಾರ ಚುನಾವಣಾ ಪ್ರಾಧಿಕಾರವು ಮಾಧ್ಯಮಿಕ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆಗಳನ್ನು ನಡೆಸುವ ಸಂಬಂಧ ಚೆಕ್‌ಲಿಸ್ಟ್‌ನಲ್ಲಿ ವಿವರಿಸಿರುವಂತೆ ಕ್ರಮವಿಡತಕ್ಕದ್ದು.

05. ಸದಸ್ಯರ ಮತದ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 20ರಲ್ಲಿ ವಿವರಿಸಿದೆ. ಅಲ್ಲದೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960, ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013 ಹಾಗೂ ಸಂಘದ / ಸಹಕಾರಿಯ ಉಪವಿಧಿಗಳನ್ನು ಗಮನಿಸತಕ್ಕದ್ದಾಗಿದೆ.

06. ಸಹಕಾರ ಸಂಘದ / ಸಹಕಾರಿಯ ಸದಸ್ಯತ್ವ ಮತದಾನದ ಹಕ್ಕು ಸಾಧಿಸುವ ಸಂಬಂಧ ಯಾವುದೆ ನ್ಯಾಯಾಲಯದಲ್ಲಿ ವಿವಾದ / ವ್ಯಾಜ್ಯಗಳಿದ್ದು, ನ್ಯಾಯಾಲಯದಿಂದ ಯಾವುದೇ ಮಧ್ಯಂತರ ಆದೇಶಗಳಿದ್ದಲ್ಲಿ ಆ ಬಗ್ಗೆ ಗಮನಿಸಿ ಅಗತ್ಯ ಕ್ರಮವಿಡುವುದು, ವಿವಾದಗಳು ಇತ್ಯರ್ಥವಾಗಿದ್ದಲ್ಲಿ ನ್ಯಾಯಾಲಯದ ಆದೇಶದಂತೆ ಸಂಬಂಧಿಸಿದ ಸಂಘವು ಅಗತ್ಯ ಕ್ರಮವಿಟ್ಟಿರುವ ಬಗ್ಗೆ ಗಮನಿಸುವುದು.

07. ಚುನಾವಣೆಗಳಿಗಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ತಗಲುವ ವೆಚ್ಚವನ್ನು ಸಂಬಂಧಿಸಿದ ಸಂಘಗಳೇ / ಸಹಕಾರಿಗಳೇ ಭರಿಸತಕ್ಕದ್ದಾಗಿದೆ. [ಅಧಿನಿಯ ಪ್ರಕರಣ 39ಎಎ(14)]

08. ಮತದಾರರ ಪಟ್ಟಿಯನ್ನು ಜಿಲ್ಲಾಚುನಾವಣಾಧಿಕಾರಿಯು ಸಿದ್ಧಪಡಿಸುವ ಸಂಬಂಧ ಸರಿಯಾದ ಮಾಹಿತಿ / ದಾಖಲೆಯನ್ನು ಒದಗಿಸುವ ಜವಾಬ್ದಾರಿ ಸಂಬಂಧಿಸಿದ ಸಹಕಾರ ಸಂಘ / ಸಹಕಾರಿಯ ಮುಖ್ಯಕಾರ್ಯನಿರ್ವಾಹಕನದ್ದಾಗಿರುತ್ತದೆ. [ಅಧಿನಿಯಮ ಪ್ರಕರಣ 39ಎಎ(15)] [ನಿಯಮ 13ಡಿ(4)]

........5/-

09. ಸಹಕಾರ ಸಂಘದ / ಸಹಕಾರಿಯ ಮತದಾನದ ಹಕ್ಕುಳ್ಳ ಮತದಾರರ ಕರಡು ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ, ಮತದಾನಕ್ಕೆ ಅರ್ಹತೆ ಹೊಂದಿರದ ಇತರೆ ಸದಸ್ಯರ ಪಟ್ಟಿ (ಕಾರಣಗಳನ್ನು ನಮೂದಿಸಿ) ಹಾಗೂ ಸುಸ್ತಿಯಾಗುವವರ ಕರಡು ಪಟ್ಟಿಯನ್ನು ಸಿದ್ಧಪಡಿಸುವ ಜವಾಬ್ದಾರಿ ಪ್ರತಿ ಸಂಘದ / ಸಹಕಾರಿಯ ಮುಖ್ಯಕಾರ್ಯನಿರ್ವಾಹಕನದ್ದಾಗಿರುತ್ತದೆ. ಈ ರೀತಿಯ ಪಟ್ಟಿಗಳನ್ನು ಚುನಾವಣಾ ದಿನಾಂಕಕ್ಕೆ ಕನಿಷ್ಟ 60 ದಿವಸಗಳು ಮುಂಚಿತವಾಗಿ ಜಿಲ್ಲಾ ಚುನಾವಣಾಧಿಕಾರಿಗಳಿಗೆ ದಾಖಲಾತಿಗಳ ಸಹಿತ ಸಲ್ಲಿಸತಕ್ಕದ್ದು. ಜಿಲ್ಲಾ ಚುನಾವಣಾಧಿಕಾರಿಯು ಸಂಬಂಧಿಸಿದ ಸಂಘಗಳು / ಸಹಕಾರಿಗಳು ಸಲ್ಲಿಸುವ ಮೇಲ್ಕಂಡ ಪಟ್ಟಿಗಳನ್ನು ಪರಿಶೀಲಿಸಿ ಸಿದ್ಧಪಡಿಸುವುದು ಮತ್ತು ಅಧಿನಿಯಮ / ನಿಯಮಗಳನ್ವಯ ಅಗತ್ಯ ಕ್ರಮವಿಡತಕ್ಕದ್ದು. ಈ ಸಂಬಂಧ ಜಿಲ್ಲಾ ಚುನಾವಣಾಧಿಕಾರಿಯು ಅವರಿಗೆ ನೆರವಾಗಲು ಮೇಲ್ವಿಚಾರಣಾ ತಂಡವನ್ನು ರಚಿಸಬಹುದಾಗಿದೆ.

10. ಪ್ರತಿಯೊಂದು ಮಾಧ್ಯಮಿಕ ಸಹಕಾರ ಸಂಘದ / ಸಹಕಾರಿಯ ಆಡಳಿತ ಮಂಡಲಿಯೂ ಸಹಕಾರ ಚುನಾವಣಾ ಪ್ರಾಧಿಕಾರವು ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಅವಶ್ಯಕವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರಗಳನ್ನು ನೀಡತಕ್ಕದ್ದಾಗಿದೆ.

11. ಮತದಾರರ ಪಟ್ಟಿಯನ್ನು ಸಂಘದ / ಸಹಕಾರಿಯ ಬೈಲಾದಲ್ಲಿ ಮತದಾರರ ಪ್ರತ್ಯೇಕ ಕ್ಷೇತ್ರಗಳಿದ್ದಲ್ಲಿ ಕ್ಷೇತ್ರವಾರು ಸಿದ್ಧಪಡಿಸತಕ್ಕದ್ದು. ಮತದಾರರ ಪಟ್ಟಿಯಲ್ಲಿ ಸದಸ್ಯರ ಹೆಸರು / ಸದಸ್ಯರ ತಂದೆ / ತಾಯಿ ಅಥವಾ ಪತಿಯ ಹೆಸರು, ಅಂಚೆ ವಿಳಾಸ, ಸದಸ್ಯತ್ವ / ಪ್ರವೇಶತ್ವ ಸಂಖ್ಯೆ ಗುರುತಿನ ಕಾರ್ಡ್ ನೀಡಿದ್ದಲ್ಲಿ ಅದರ ಸಂಖ್ಯೆಯನ್ನು ತಪ್ಪದೇ ನಮೂದಿಸತಕ್ಕದ್ದಾಗಿರುತ್ತದೆ.

12. ಅಂತಿಮ ಮತದಾರರ ಪಟ್ಟಿಯು ಮಾಧ್ಯಮಿಕ ಸಹಕಾರ ಸಂಘ / ಸಹಕಾರಿಯ ಸಂಬಂಧದಲ್ಲಿ ಮತದಾನದ ಹಕ್ಕುಳ್ಳ ಎಲ್ಲಾ ಬಿಡಿ ಸದಸ್ಯರ ಪಟ್ಟಿಯಾಗಿರುತ್ತದೆ. ಮತ್ತು ಮತದಾನ ಮಾಡಲು ಅರ್ಹತೆ ಹೊಂದಿದ ಸದಸ್ಯ ಸಂಘಗಳ ಡೆಲಿಗೇಟ್‌ನ ವಿರಗಳನ್ನುಳ್ಳ ಪಟ್ಟಿಯಾಗಿರುತ್ತದೆ. ಪ್ರತಿ ಸಹಕಾರ ಸಂಘವು / ಸಹಕಾರಿಯು ಅಂಥ ಮತದಾರರ ಪಟ್ಟಿಯ ಪ್ರತಿಯನ್ನು ಸಂಘದ / ಸಹಕಾರಿಯ ಕಛೇರಿಯಲ್ಲಿ ಮತ್ತು ಜಿಲ್ಲಾ ಚುನಾವಣಾಧಿಕಾರಿಗಳ ಕಛೇರಿಯಲ್ಲಿ ವೀಕ್ಷಣೆಗೆ ಮುಕ್ತವಾಗಿಟ್ಟಿರತಕ್ಕದ್ದಾಗಿದೆ.

13. ಸಹಕಾರ ಸಂಘಗಳ ಆಡಳಿತ ಮಂಡಲಿಗೆ / ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ಜಿಲ್ಲಾ ಚುನಾವಣಾಧಿಕಾರಿಯು ಕಾನೂನಿಗೆ ಅನುಗುಣವಾಗಿ ಸಹಕಾರ ಚುನಾವಣಾ ಪ್ರಾಧಿಕಾರದ ಪರವಾಗಿ ಕಾರ್ಯನಿರ್ವಹಿಸುವ ಸಂಬಂಧ ಆಗಾಗ್ಗೆ ಪ್ರಾಧಿಕಾರವು ನೀಡುವ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸಲು ಸೂಚಿಸಿದೆ.

14. ಸೌಹಾರ್ದ ಸಹಕಾರಿಗಳ ಸಂಬಂಧ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ದಿನಾಂಕ : 19-09-2013 ರಿಂದ ಸರ್ಕಾರವು ರಾಜ್ಯ ಪತ್ರದಲ್ಲಿ ಪ್ರಕಟಗೊಳಿಸುವುದರ ಮುಖಾಂತರ ಜಾರಿಗೊಳಿಸಿದ್ದು, ನಿಯಮ-5, 5ಎ ನಿಂದ 5ಜೆಡ್ ಹಾಗೂ ನಿಯಮ 5ಎಎ ನಿಂದ 5ಎಕೆ ಯನ್ನು ಹಾಗೂ 6, 6ಹೆಚ್, 6ಐ ಗಳನ್ನು ಗಮನಿಸಬಹುದಾಗಿದೆ.

15. ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ಕ್ಕೆ ಅನ್ವಯಿಸುವಂತೆ ವಿವಿಧ ನಿಯಮಗಳಿಗೆ ಅನುಗುಣವಾಗಿ ನಿರ್ಧಿಷ್ಟವಾದ ನಮೂನೆಗಳಿದ್ದು ಅದರಂತೆ ಜಿಲ್ಲಾ ಚುನಾವಣಾಧಿಕಾರಿ / ರಿಟರ್ನಿಂಗ್ ಆಫೀಸರ್ಸ್ ವಿವರಗಳನ್ನು ಭರ್ತಿ ಮಾಡಿ ಕ್ರಮವಿಡತಕ್ಕದ್ದಾಗಿದೆ.

16. ಜಿಲ್ಲಾ ಚುನಾವಣಾಧಿಕಾರಿಗಳು ಅಧಿನಿಯಮ / ನಿಯಮಗಳನ್ವಯ ಕೈಗೊಳ್ಳುವ ಕ್ರಮಗಳು ಮುಕ್ತ ಹಾಗೂ ಪಾರದರ್ಶಕತೆಯನ್ನು ಹೊಂದಿರಬೇಕಾಗಿದ್ದು ಮಾಹಿತಿ ಹಕ್ಕು ಅಧಿನಿಯಮದಡಿ ಯಾವುದೇ ಅರ್ಜಿದಾರರಿಗೆ ಸದರಿ ಅಧಿಕಾರಿಗಳು ಹೊರಡಿಸುವ ಆದೇಶ / ಅಧಿಸೂಚನೆ / ಪತ್ರ ವ್ಯವಹಾರದ ಪ್ರತಿಯನ್ನು ಸದರಿ ಅಧಿನಿಯಮದಡಿ ನೀಡಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳು ಹೆಚ್ಚಿನ ಎಚ್ಚರ ವಹಿಸಿ ಕಾನೂನಿಗನುಗುಣವಾಗಿ ಅಗತ್ಯ ಕ್ರಮವಿಡಲು ಸೂಚಿಸಿದೆ.

(ಎನ್.ಸಿ.ಮುನಿಯಪ್ಪ)

ಸಹಕಾರ ಚುನಾವಣಾ ಪ್ರಾಧಿಕಾರದ ಆಯುಕ್ತರು.